ಆಯುಕ್ತರ ಕಚೇರಿ
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ,
ನಂ. 8, ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು – 560052. ದೂರವಾಣಿ: 080 – 2226 2187

# ವ್ಯವಹಾರಗಳ ಸುಲಲಿತ ನಿರ್ವಹಣೆ – ರಾಜ್ಯ ಮಟ್ಟದ ಸುಧಾರಣೆ
# EASE OF DOING BUSINESS – STATE LEVEL REFORMS

## ಸೇವೆಯ ರೂಪುರೇಷೆಗಳು
## OUTLINE OF SERVICES

### 1. ಪ್ರಸ್ತಾವನೆ (PREFACE)

1. ಸರ್ಕಾರದ ವ್ಯವಹಾರಗಳನ್ನು ನಿಯಂತ್ರಿಸುವ ನಿಯಮಾವಳಿಗಳನ್ನು ಸರಳೀಕರಿಸಲು ಕರ್ನಾಟಕ ಸರ್ಕಾರವು ಪ್ರಗತಿ ಪರವಾಗಿ ಕೆಲಸ ಮಾಡುತ್ತಿದೆ. ಅದರಂತೆ ಆಹಾರ, ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಖೆಯ ವ್ಯಾಪ್ತಿಯಲ್ಲಿ ಬರುವ ವಿಷಯಗಳ ವ್ಯವಹಾರಗಳ ಒಟ್ಟಾರೆ ವಾತಾವರಣ ಸುಧಾರಿಸಲು ಅನೇಕ ಕ್ರಮಗಳನ್ನು ಕೈಗೊಳ್ಳಲಾಗಿದೆ.
2. ಭಾರತ ಸರ್ಕಾರ ವಾಣಿಜ್ಯ ಮತ್ತು ಕೈಗಾರಿಕೆಗಳ ಮಂತ್ರಾಲಯದ ಕೈಗಾರಿಕಾಭಿವೃದ್ಧಿ ಮತ್ತು ಆಂತರಿಕ ವ್ಯಾಪಾರಾಭಿವೃದ್ಧಿ ಇಲಾಖೆಯು ಈ ವಿಷಯದಲ್ಲಿ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಅನುಷ್ಠಾನಗೊಳಿಸಬಹುದಾದ ರಾಜ್ಯ ವ್ಯವಹಾರ ಸುಧಾರಣಾ ಕ್ರಿಯಾ ಯೋಜನೆ (SBRAP-State Business Reforms Action Plan) ಮತ್ತು ಜಿಲ್ಲಾ ವ್ಯವಹಾರ ಸುಧಾರಣಾ ಕ್ರಿಯಾ ಯೋಜನೆ (DBRAP-State Business Reforms Action Plan) ಗಳನ್ನು ನೀಡಿವೆ.
3. ಅದರಂತೆ ರಾಜ್ಯ ಸರ್ಕಾರವು ಜಾರಿಗೊಳಿಸುತ್ತಿರುವ "ವ್ಯವಹಾರಗಳನ್ನು ಸುಲಲಿತವಾಗಿ ನಿರ್ವಹಿಸುವ ಯೋಜನೆ" (Ease of Doing Business) ಯನ್ನು ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾಗಳ ಇಲಾಖೆಯಲ್ಲಿ ಜಾರಿಗೊಳಿಸುವ ಉದ್ದೇಶದಿಂದ ಸಾರ್ವಜನಿಕ ವಿತರಣಾ ವ್ಯವಸ್ಥೆ ಅಡಿಯಲ್ಲಿ ನೀಡುವ "ನ್ಯಾಯಬೆಲೆ ಅಂಗಡಿಗಳ ಹೊಸ ಪ್ರಾಧಿಕಾರ ಮಂಜೂರಾತಿ ಮತ್ತು ನವೀಕರಣ ಹಾಗೂ ತತ್ಸಂಬಂಧದ ಸೇವೆಗಳನ್ನು" ಆನ್‌ಲೈನ್‌ನಲ್ಲಿ ಅಳವಡಿಸಿ ಸಕಾಲ ಸೇವೆಗಳ ಕಾಯ್ದೆ 2011 ರ ಅಡಿಯಲ್ಲಿ ಸಂಪೂರ್ಣವಾಗಿ "ಭೌತಿಕ ಸ್ಪರ್ಶ ರಹಿತವಾಗಿ" ನಿರ್ವಹಿಸಲು ಸರ್ಕಾರ ತೀರ್ಮಾನಿಸಿದೆ.
4. ಈ ಹಿನ್ನೆಲೆಯಲ್ಲಿ ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾಗಳ ಇಲಾಖೆ, ಕಾರ್ಯವ್ಯಾಪ್ತಿಗೆ ಬರುವ "ನ್ಯಾಯಬೆಲೆ ಅಂಗಡಿಗಳ ಹೊಸ ಪ್ರಾಧಿಕಾರ ನೀಡಿಕೆ/ನವೀಕರಣ ಮತ್ತು ತತ್ಸಂಬಂಧದ ವಿಷಯಗಳನ್ನು"

ಸಕಾಲ ಸೇವೆಗಳಡಿ ಆನ್‌ಲೈನ್‌ಗೊಳಪಡಿಸಿ "ಭೌತಿಕ ಸ್ಪರ್ಶವಿಲ್ಲದೆ" ನಿರ್ವಹಿಲು ಆದೇಶ ಹೊರಡಿಸಲು ಆಯುಕ್ತರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾಗಳ ಇಲಾಖೆ, ಇವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಪರಿಶೀಲಿಸಿ ಮುಂದಿನಂತೆ ಆದೇಶಿಸಿದೆ.

1. ಈ ಸೇವೆಗಳ ನಿರ್ವಹಣೆಗಾಗಿ "ಗುಣಮಟ್ಟದ ಕಾರ್ಯಶೀಲ ನಿಯಮಾವಳಿಗಳನ್ನು" ರಚಿಸಿ ಕಾಲಕಾಲಕ್ಕೆ ಇಲಾಖೆಯ ವೆಬ್ ಪೋರ್ಟಲ್‌ನಲ್ಲಿ ಪ್ರಕಟಿಸಬೇಕು.
2. ಕರ್ನಾಟಕ ಸಕಾಲ ಸೇವೆಗಳ ಕಾಯ್ದೆ 2011 ಮತ್ತು ತಿದ್ದುಪಡಿ ಕಾಯ್ದೆ 2014 ರಡಿಯಲ್ಲಿ ಈ ಸೇವೆಯ ನಿರ್ವಹಣೆಗೆ ಕಾಲಮಿತಿ ನಿಗಧಿಪಡಿಸಬೇಕು
3. ಈ ಸೇವೆಗಾಗಿ ಸಾರ್ವಜನಿಕರು ಸಲ್ಲಿಸಬೇಕಾದ ಅರ್ಜಿ ಮತ್ತು ಅಗತ್ಯ ದಾಖಲೆಗಳನ್ನು ಮತ್ತು ನಿಗಧಿತ ಶುಲ್ಕವನ್ನು ಭೌತಿಕ ಸ್ಪರ್ಶವಿಲ್ಲದೆ ಆನ್‌ಲೈನ್‌ನಲ್ಲಿ ಮಾತ್ರ ಸಲ್ಲಿಸಲು ವ್ಯವಸ್ಥೆ ಮಾಡಬೇಕು.
4. ಈ ಸೇವೆಯ ಸ್ಥಿತಿಗತಿಯ ಬಗ್ಗೆ ಅರ್ಜಿದಾರರಿಗೆ ಎಸ್‌ಎಂಎಸ್/ಇ–ಮೇಲ್ ಮೂಲಕ ಪೋರ್ಟಲ್‌ನಲ್ಲಿ ಮಾಹಿತಿ ನೀಡುವ ವ್ಯವಸ್ಥೆಯನ್ನು ಮಾಡಬೇಕು.
5. ಈ ಸೇವೆಯ ಅರ್ಜಿ ಮೇಲೆ ಅಗತ್ಯ ಕ್ರಮ ಮತ್ತು ಸಂಬಂಧಿಸಿದ ಪ್ರಮಾಣ ಪತ್ರ/ತನಿಖಾ ವರದಿಗಳನ್ನು ಅರ್ಜಿದಾರರು ಡೌನ್‌ಲೋಡ್ ಮಾಡಲು ಇಲಾಖೆಯ ಪೋರ್ಟಲ್‌ನಲ್ಲಿ ಅವಕಾಶ ಮಾಡಬೇಕು.
6. ಈ ಆನ್‌ಲೈನ್ ವ್ಯವಸ್ಥೆಯ ಪ್ರಕಾರ ಅರ್ಜಿದಾರರು ಮತ್ತು ಇಲಾಖೆ ಹಾಗೂ ಇತರೆ ಯಾವುದೇ ಏಜೇನ್ಸಿಯ ಮಧ್ಯೆ ಯಾವುದೇ ಭೌತಿಕ ಸ್ಪರ್ಶ ಇರಬಾರದು.
7. ಈ ಸೇವೆಗಾಗಿ ಸಲ್ಲಿಸುವ ಆನ್‌ಲೈನ್ ಅರ್ಜಿಯ ಹೊರತಾಗಿ ಬೇರಾವುದೇ ಭೌತಿಕ ಅಥವಾ ಕೈಬರಹದ ಅರ್ಜಿಯನ್ನು ಅರ್ಜಿದಾರರಿಂದ ಅಧಿಕಾರಿಗಳು ಪಡೆಯುವಂತಿಲ್ಲಾ.
8. ಈ ಸೇವೆಗಾಗಿ ಆನ್‌ಲೈನ್‌ನಲ್ಲಿ ಅರ್ಜಿಯ ಜೊತೆ ಸಲ್ಲಿಕೆಯಾಗುವ ದಾಖಲೆಗಳ ಹೊರತಾಗಿ ಬೇರಾವುದೇ ದಾಖಲೆಗಳನ್ನು ಅಧಿಕಾರಿಗಳು ಪಡೆಯುವ ಅಗತ್ಯವಿಲ್ಲ.
9. ಕಾನೂನಿನ ಪ್ರಕಾರ ಭೌತಿಕ ತಪಾಸಣೆ ಮಾಡಬೇಕಾದ ಪ್ರಕರಣದ ಹೊರತಾಗಿ ಅರ್ಜಿದಾರರು ಇಲಾಖೆಯ ಅಧಿಕಾರಿಗಳ ಜೊತೆ ಭೌತಿಕ ಸಂಪರ್ಕ ಹೊಂದಬಾರದು.
10. ಅರ್ಜಿಯ ಬಗ್ಗೆ ಬರುವ ಯಾವುದೇ ಆಕ್ಷೇಪಣೆ/ಸ್ಪಷ್ಟನೆಗಳ ಬಗ್ಗೆ ಆನ್‌ಲೈನ್ ಪೋರ್ಟಲ್‌ಗಳ ಮೂಲಕವೇ ಅಧಿಕಾರಿಗಳು ವ್ಯವಹರಿಸಬೇಕು.
11. ಈ ಸೇವೆಯ ಬಗ್ಗೆ ಎಲ್ಲಾ ತೀರ್ಮಾನ/ಪ್ರಾಧಿಕಾರಗಳು/ಹಿಂಬರಹಗಳನ್ನು ಅರ್ಜಿದಾರರು ಇಲಾಖೆಯ ವೆಬ್‌ಸೈಟ್‌ನಿಂದ ಮತ್ತು ಆನ್‌ಲೈನ್‌ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶವಿರಬೇಕು.
12. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ "ವ್ಯವಹಾರಗಳ ಸುಲಲಿತ ನಿರ್ವಹಣೆ ಸುಧಾರಣಾ" ಯೋಜನೆಯ ಉದ್ದೇಶದಂತೆ ಈ ಯೋಜನೆಯಡಿ ಅರ್ಜಿದಾರರು ಮತ್ತು ಇಲಾಖೆಯ ಮಧ್ಯೆ ಯಾವುದೇ ಭೌತಿಕ ಸಂಪರ್ಕಕ್ಕೆ ಅವಕಾಶವಿರದೇ ಸಂಪೂರ್ಣವಾಗಿ "ಆನ್‌ಲೈನ್" ಮತ್ತು ಸ್ಪರ್ಶ ಮುಕ್ತ" ಹಾಗೂ "ಕಾಲಮಿತಿ" ಯಂತೆ ನಿರ್ವಹಿಸತಕ್ಕದ್ದು.

## 2. ಹೊಸ ನ್ಯಾಯಬೆಲೆ ಅಂಗಡಿಗಳ ಪ್ರಾಧಿಕಾರ ಮಂಜೂರಾತಿ/ ನವೀಕರಣ/ ನಕಲು / ರದ್ದತಿ

**GRANT OF NEW / RENEWAL DUPLICATE / CANCELLATION OF FAIR PRICE SHOPS AUTHORIZATION.**

1. ನ್ಯಾಯಬೆಲೆ ಅಂಗಡಿಗಳ ಮಂಜೂರಾತಿ ಕ್ರಮ / Procedure of Sanctioning
2. ಅರ್ಜಿ ಆಹ್ವಾನಿಸಿ ಅಧಿಸೂಚನೆ / Notification for Calling Applications
3. ಅರ್ಜಿಗಳ ಸಲ್ಲಿಕೆ / Filling of Application
   - 3.1. ಹೊಸದು / New
   - 3.2. ನವೀಕರಣ / Renewal
   - 3.3. ನಕಲು / Duplicate
   - 3.4. ಅನುಕಂಪ / Compassionate Grounds
   - 3.5. ರದ್ದತಿ / Cancellation
4. ಸಲ್ಲಿಸಬೇಕಾದ ದಾಖಲೆಗಳು / Documents to be upload
5. ಶುಲ್ಕ ಪಾವತಿ / Fee
6. ಭದ್ರತಾ ಠೇವಣಿ / Security Deposit
7. ಪ್ರಾಧಿಕಾರಗಳಿಂದ ಪರಿಶೀಲನೆ / Verifications by Authorities
   - 7.1. ಸ್ಥಳ ಪರಿಶೀಲನೆಗೆ ಅರ್ಜಿ ರವಾನೆ / Forwarding of Application to Field
   - 7.2. ತಹಶೀಲ್ದಾರ್/ ಸಹಾಯಕ ನಿರ್ದೇಶಕರ ವರದಿ ರವಾನೆ / Forwarding of reports by Tahsildar/ AD
8. ಮಂಜೂರಾತಿ/ ನವೀಕರಣ/ ರದ್ದತಿ/ ತಿರಸ್ಕರಣೆ / Sanction / Renewal / Cancellation/ Rejection
   - 8.1. ಪ್ರಾಧಿಕಾರ ಮಂಜೂರಾತಿ/ Sanction of Authorization
   - 8.2. ನವೀಕರಣ / Renewal
   - 8.3. ರದ್ದತಿ / Cancellation
   - 8.4. ಹಿಂಬರಹ / Endorsement
9. ಪ್ರತಿಗಳನ್ನು ಪಡೆಯುವ ಬಗ್ಗೆ/ Downloading of Copies